9) ಅಲ್ ಆಮೀನ್ ವೈದ್ಯಕೀಯ ಕಾಲೇಜು, ಬಿಜಾಪುರ — ಜಿಲ್ಲಾ ಆಸ್ಪತ್ರೆ, ಬಿಜಾಪುರ

10) ಆದಿ ಚುಂಚನಗಿರಿ ವೈದ್ಯಕೀಯ ಕಾಲೇಜು, ಮಂಡ್ಯ — ಜಿಲ್ಲಾ ಆಸ್ಪತ್ರೆ ಮಂಡ್ಯ

ಗುಲ್ಬರ್ಗಾ ಜಿಲ್ಲೆಯಲ್ಲಿ ಅರಣ್ಯವನ್ನು ಅಭಿವೃದ್ಧಿ

900 - ಶ್ರೀ ರೇವು ನಾಯಕ್ ಬೆಳಮಗಿ (ಕಮಲಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗುಲ್ಬರ್ಗಾ ಜಿಲ್ಲೆಯಾದ್ಯಂತ ಅರಣ್ಯ ಬೆಳೆಸುವ ಯೋಜನೆ ಸಲುವಾಗಿ "ಅಭಿವೃದ್ಧಿ ಕ್ರಮ ಕೈಗೊಂಡ ಕಾರ್ಯಕ್ರಮಗಳೇನು; ಯಾವ ಯಾವ ಯೋಜನೆ ಸಲುವಾಗಿ ಎಷ್ಟೆಷ್ಟು ಹಣ ಬಿಡುಗಡೆಯಾಗಿತ್ತು, ಖರ್ಚಾದ ಹಣ ಎಷ್ಟು ?

ಆ) ಸಸಿ ನೆಡುವ ಯೋಜನೆಯಲ್ಲಿ ಎಷ್ಟು ಸಸಿಗಳನ್ನು ನೆಡಲಾಗಿದೆ, ಉಚಿತ ಸಸಿ ಎಷ್ಟು ವಿತರಿಸಲಾಗಿದೆ; ಇದರಲ್ಲಿ ಈಗ ಜೀವಂತ ಉಳಿದಿರುವ ಸಸಿ- ಗಿಡಗಳೆಷ್ಟು, ನಾಶವಾಗಿರುವ ಸಸಿ- ಗಿಡಗಳೆಷ್ಟು ?

ಇ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದವರಿಗೆ ಸಸಿ ನೆಡುವ ಪ್ಲಾಂಟೇಷನ್ ಏನಾದರು ಜಿಲ್ಲೆಯ ವ್ಯಾಪ್ತಿಯಲ್ಲಿ ಮಾಡಲಾಗಿದೆಯೇ, ಇದ್ದರೆ ವಿವರ ತಿಳಿಸುವುದು ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಇಲಾಖಾ ವತಿಯಿಂದ 1994-95ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ 782 ಹೆಕ್ಟೇರ್ ಅರಣ್ಯ ಪ್ರದೇಶದಲ್ಲಿ ಅರಣ್ಯ ಬೆಳೆಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿವಿಧ ಯೋಜನೆಗಳಡಿಯಲ್ಲಿ ಅರಣ್ಯೀಕರಣ ಕೆಲಸಕ್ಕಾಗಿ ವೆಚ್ಚ ಮಾಡಿದ ಹಣದ ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಜಿಲ್ಲೆಯಾದ್ಯಾಂತ ಒಟ್ಟು 30.145 ಲಕ್ಷ ಸಸಿಗಳನ್ನು ಪ್ರಾದೇಶಿಕ ವಿಭಾಗ ಮತ್ತು ಸಾಮಾಜಿಕ ಅರಣ್ಯ ವಿಭಾಗಗಳಿಂದ ನೆಡಲಾಗಿದೆ.

1994-95ನೇ ಸಾಲಿನಲ್ಲಿ ಜಿಲ್ಲೆಯಾದ್ಯಾಂತ ಒಟ್ಟು 14.667 ಲಕ್ಷ ಸಸಿಗಳನ್ನು ಉಚಿತವಾಗಿ ಸಾರ್ವಜನಿಕರಿಗೆ ವಿತರಿಸಲಾಗಿದೆ.

ಶೇ. 70 ರಷ್ಟು ಸಸಿಗಳು ಜೀವಂತವಾಗಿರುತ್ತದೆ ಮತ್ತು 30ರಷ್ಟು ಸಸಿಗಳು ನಾಶವಾಗಿರುತ್ತವೆ.

ಇ) ವಿಶೇಷ ಘಟಕ ಯೋಜನೆಯಡಿಯಲ್ಲಿ (ಕೇಂದ್ರ) 1994-95ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ ರೈತರ ಒಟ್ಟು 40 ಫಲಾನುಭವಿಗಳ ಜಮೀನುಗಳಲ್ಲಿ 20 ಹೆಕ್ಟೇರ್ ಪ್ರದೇಶಗಳಲ್ಲಿ ಗಿಡಗಳನ್ನು ನೆಡಲಾಗಿದೆ (ಭದ್ರತಾ ನೆಡುತೋಪು)

ಅನುಬಂಧ

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಬಿಡುಗಡೆ ಮಾಡಲಾದ ಹಣ (ಲಕ್ಷ ರೂ.ಗಳಲ್ಲಿ)	ವೆಚ್ಚ ಮಾಡಲಾದ ಹಣ (ಲಕ್ಷ ರೂ.ಗಳಲ್ಲಿ)
1.	ಈಣಿತ ಅರಣ್ಯ ಅಭಿವೃದ್ಧಿ	3.000	3.000
2.	ನಗರ ಪ್ರದೇಶಗಳ ಹಸಿರೀಕರಣ	12.000	11.980
3.	ಸಾಮಾಜಿಕ ಅರಣ್ಯ (ರಾಜ್ಯ)	15.404	15.400
4.	ವಿಶೇಷ ಘಟಕ ಯೋಜನೆ	3.000	3.000
5.	ರಸ್ತೆ ಬದಿ ನೆಡುತೋಪು	7.000	6.994
6.	ಉರುವಲು ಮತ್ತು ಮೇವು ಬೆಳೆಸುವ ಯೋಜನೆ	23.520	22.780
7.	ಸಾರ್ವಜನಿಕ ವಿತರಣೆಗಾಗಿ ಸಸಿಗಳನ್ನು ಬೆಳೆಸುವುದು	3.000	2.990
8.	ಎಫ್.ಡಿ.ಎಫ್ 03 ಇನ್ನಿತರ ನೆಡುತೋಪು	6.000	5.990
9.	ಎಫ್.ಡಿ.ಎಫ್ 04 ಶಾಲಾವನ	2.000	1.993
10.	ಕರ್ನಾಟಕ ಸಾಮಾಜಿಕ ಅರಣ್ಯ ಯೋಜನೆ	61.000	60.996
11.	ಭೂಸಾರ ಸಂರಕ್ಷಣೆ ಅರಣ್ಯೀಕರಣ	6.000	5.973
12.	ಶಾಲಾ ನರ್ಸರಿ	1.50	1.485
13.	ವಿಕೇಂದ್ರಿಕೃತ ಸಸ್ಯಕ್ಷೇತ್ರ	2.000	2.000
14.	ನಾಗಾರ್ಜುನ ಸಾಗರ ನದಿ ಕಣಿ ಯೋಜನೆ	5.25	5.202
15.	ವಿಶೇಷ ಘಟಕ ಯೋಜನೆ (ಕೆ)	1.00	0.991
16.	ಬರಗಾಲ ಪೀಡಿತ ಪ್ರದೇಶ ಅಭಿವೃದ್ಧಿ ಯೋಜನೆ	60.60	37.616
17.	ಜವಾಹರ್ ರೋಜಗಾರ್ ಯೋಜನೆ (ಶೇ 20)	43.905	44.02
18.	ಉದ್ಯೋಗ ಭರವಸೆ ಯೋಜನೆ (ಕೇಂದ್ರ)	118.601	18.535
19.	ಉದ್ಯೋಗ ಭರವಸೆ ಯೋಜನೆ (ರಾಜ್ಯ)	14.99	14.987

20.	ಜವಾಹರ್ ರೋಜಗಾರ ಯೋಜನೆ (ಎರಡನೇ ವಾಹನಿ)	70.00	67.858

ಸರ್ಕಾರಿ ಆಸ್ಪತ್ರೆಯಲ್ಲಿ ಗೈರುಹಾಜರಾಗಿರುವವರ ಕುರಿತು

907 - ಶ್ರೀ ಎನ್. ರಾಜಣ್ಣ (ಭಾರತಿ ನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಆಸ್ಪತ್ರೆಯಲ್ಲಿ ಗೈರು ಹಾಜರಾಗಿರುವ ವೈದ್ಯರುಗಳ ತಜ್ಞರುಗಳ ಸಂಖ್ಯೆ ಮತ್ತು ಹೊರ ದೇಶಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು?

ಆ) ಇವರುಗಳ ಮೇಲೆ ಕ್ರಮ ಜರುಗಿಸುವ ಬಗ್ಗೆ ತೆಗೆದುಕೊಂಡ ಕ್ರಮವೇನು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 61 ಮಂದಿ ವೈದ್ಯಾಧಿಕಾರಿಗಳು. ದೀರ್ಘಕಾಲದಿಂದ ಅನಧಿಕೃತ ಗೈರುಹಾಜರಿಯಾಗಿರುತ್ತಾರೆ. ಇವರುಗಳು ಹೊರ ದೇಶಗಳಲ್ಲಿ ಇರುವ ಬಗ್ಗೆ ವಿವರವಿಲ್ಲ.

ಆ) ಇವರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕಮಲಾಪುರ ಮತ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಇರುವ ಸೌಲಭ್ಯ

911 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ಕಮಲಾಪುರ ಮತ ಕ್ಷೇತ್ರದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಇರುವ ಸೌಲಭ್ಯಗಳೇನು; ಸಾಕಷ್ಟು ಶಿಕ್ಷಕರ ನೇಮಕಾತಿ ಆಗಿದೆಯೇ?

ಆ) ಖಾಲಿ ಇರುವ ಶಿಕ್ಷಕರ ಹುದ್ದೆಗಳು ಎಷ್ಟು ಹಾಗಿದ್ದಲ್ಲಿ ಸದರಿ ಹುದ್ದೆಗಳಿಗೆ ನೇಮಕ ಯಾವಾಗ ಮಾಡಲಾಗುವುದು?

ಇ) ಇದುವರೆಗೂ ಶಿಕ್ಷಕರ ಕೊರತೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಎಲ್ಲಾ ಶಿಕ್ಷಣ ಸಂಸ್ಥೆಗಳಿಗೂ ಸ್ವಂತ ಕಟ್ಟಡ ಸೌಲಭ್ಯ ಇದೆಯೇ, ಕಟ್ಟಡ ಕೊರತೆ ಇರುವ ಶಾಲೆಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಕಮಲಾಪುರ ಮತ ಕ್ಷೇತ್ರದಲ್ಲಿ 138 ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು 517 ಶಿಕ್ಷಕರ ನೇಮಕ ಮಾಡಲಾಗಿದ್ದು, 137 ಶಾಲಾ ಕಟ್ಟಡ ಒದಗಿಸಲಾಗಿದೆ. 30,750 ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿರುವರು. 517 ಶಿಕ್ಷಕರ ನೇಮಕ ಮಾಡಿದ್ದು ಪ್ರಾಥಮಿಕ ಶಾಲೆಯಲ್ಲಿ ಕೇವಲ 18 ಶಿಕ್ಷಕರ ಹುದ್ದೆ ಮಾತ್ರ ಖಾಲಿ ಇರುತ್ತದೆ. 1994ನೇ ಸಾಲಿನಲ್ಲಿ 15 ಪ್ರೌಢ ಶಾಲಾ ಶಿಕ್ಷಕರನ್ನು ನೇಮಕ ಮಾಡಲಾಗಿದೆ.